ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ. DTE-ADMI0ACM2/8/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:02-09-2020.

-:: ಸು ತ್ತೋಲೆ ::-

ವಿಷಯ: **2020-21ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಾತಿ ಪ್ರಕ್ರಿಯೆಯ ಎರಡನೇ ಮುಂದುವರೆದ ಸುತ್ತನ್ನು (Second Extended Round) ನಡೆಸಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲು ಅವಧಿ ವಿಸ್ತರಿಸುವ ಕುರಿತು.**

ಉಲ್ಲೇಖ: ಈ ಕಛೇರಿ ಪ್ರವೇಶಾಧಿಸೂಚನೆ ಪತ್ರ ಸಂ. DTE-ADMI0ACM2/8/2020, ದಿನಾಂಕ: 04-08-2020.

-000000-

2020-21ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಈ ಕಛೇರಿ ಪ್ರವೇಶಾಧಿಸೂಚನೆಯನ್ವಯ ಆನ್‌ಲೈನ್ ನಾನ್-ಇಂಟರಾಕ್ಟೀವ್ ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ಪ್ರವೇಶಾತಿ ಪ್ರಕ್ರಿಯೆಯ ಪ್ರಥಮ & ದ್ವಿತೀಯ ಸುತ್ತಿನ ಸೀಟು ಹಂಚಿಕೆ ಕಾರ್ಯವು ಪ್ರಗತಿಯಲ್ಲಿರುತ್ತದೆ.

ರಾಜ್ಯದ ಸರ್ಕಾರಿ / ಅನುದಾನಿತ / ಖಾಸಗಿ (ಸರ್ಕಾರಕ್ಕೆ ಅಧ್ಯರ್ಪಣೆ ಮಾಡಿರುವ ಸೀಟುಗಳಿಗೆ) ಪಾಲಿಟೆಕ್ನಿಕ್‌ಗಳ ಕೋರ್ಸುಗಳಿಗೆ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾದ ಅರ್ಹ ಅಭ್ಯರ್ಥಿಗಳಿಗೆ ಪ್ರಥಮ ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯ ಎರಡನೇ ಮುಂದುವರೆದ ಸುತ್ತಿನಲ್ಲಿ **(Second Extended Round)** ಭಾಗವಹಿಸಲು ಆನ್‌ಲೈನ್ ನಾನ್-ಇಂಟರಾಕ್ಟೀವ್ ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮುಖಾಂತರ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಅರ್ಜಿಯನ್ನು ಆಹ್ವಾನಿಸಿ ಈ ಕೆಳಕಂಡಂತೆ ಅವಧಿಯನ್ನು ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸಾರ್ವಜನಿಕರ ಹಿತದೃಷ್ಟಿಯ ಮೇರೆಗೆ ಅರ್ಹ ಅಭ್ಯರ್ಥಿಗಳಿಂದ ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಹಾಗೂ ತಮ್ಮ ಇಚ್ಛೆಯ ಅನುಸಾರ ಪಾಲಿಟೆಕ್ನಿಕ್/ಕೋರ್ಸ್‌ಗಳನ್ನು ಆಯ್ಕೆ ಮಾಡಿ ಆದ್ಯತಾ ಕ್ರಮನುಸಾರ ಗರಿಷ್ಠ ಸಂಖ್ಯೆಯ ಆಪ್ಷನ್ ಎಂಟ್ರಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಲು ದಿನಾಂಕ:**07-09-2020** ರಿಂದ **16-09-2020** ರವರೆಗೆ ಅವಧಿಯನ್ನು ವಿಸ್ತರಿಸಿ ಅನುಮತಿ ನೀಡಲಾಗಿದೆ.

1. ***ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆಗೆ ಸಮಾನವಾದ ಕೋರ್ಸ್‌ಗಳ ಪ್ರವೇಶಕ್ಕೆ ಇರಬೇಕಾದ ಕನಿಷ್ಠ ಶಿಕ್ಷಣಾರ್ಹತೆಗಳು:***

ಅ) ಇಂಜಿನಿಯರಿಂಗ್ ಕೋರ್ಸುಗಳಿಗೆ;

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ. 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಆ) ನಾನ್-ಇಂಜಿನಿಯರಿಂಗ್ ಕೋರ್ಸುಗಳಿಗೆ;

ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ ಮತ್ತು ಆಂಗ್ಲ), ಲೈಬ್ರರಿ ಸೈನ್ಸ್, ಅಪೆರಲ್ ಡಿಸೈನ್ ಮತ್ತು ಫ್ಯಾಬ್ರಿಕೇಷನ್ ಟೆಕ್ನಾಲಜಿ(ಎಡಿಎಫ್‌ಟಿ) ಹಾಗೂ ಮಾಡ್ರನ್ ಆಫೀಸ್ ಮ್ಯಾನೇಜ್‌ಮೆಂಟ್ ಕೋರ್ಸುಗಳಿಗೆ:-

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕರ್ನಾಟಕ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆ ಶೇ. 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

*ಆಟೋಮೊಬೈಲ್ ಇಂಜಿನಿಯರಿಂಗ್ ಕೋರ್ಸಿನ ವಯೋಮಿತಿ:–*

ಪ್ರಥಮ ವರ್ಷದ ಆಟೋಮೊಬೈಲ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸಿಗೆ ಪ್ರವೇಶಾತಿ ಪಡೆಯುವ ಅಭ್ಯರ್ಥಿಗಳ ವಯೋಮಿತಿಯನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಸರ್ಕಾರವು ಆದೇಶಿಸಿದೆ.

**"In the case of candidates applying for Diploma in Automobile Engineering the candidate should have attained the age of 15 years and 06 Months as on 1st July of the year of admission".**

2. *ಪ್ರವೇಶಕ್ಕೆ ಇರಬೇಕಾದ ಇತರೇ ಅರ್ಹತೆಗಳು:*

ಅಭ್ಯರ್ಥಿಯು ಭಾರತದ ಪ್ರಜೆಯಾಗಿರಬೇಕು ಹಾಗೂ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯನ್ನೊಳಗೊಂಡು ಕನಿಷ್ಠ ಐದು ವರ್ಷಗಳವರೆಗೆ ವ್ಯಾಸಂಗ ಮಾಡಿರಬೇಕು. ಆದಾಗ್ಯೂ 05 ವರ್ಷಗಳ ವ್ಯಾಸಂಗದ ಷರತ್ತಿನಿಂದ ಕೆಲವು ಗುಂಪಿನ ಅಭ್ಯರ್ಥಿಗಳಿಗೆ ವಿನಾಯಿತಿ ನೀಡಲಾಗಿದೆ. ಈ ಬಗ್ಗೆ ಅಂತರ್ಜಾಲದಲ್ಲಿ ಪ್ರಕಟಿಸಿರುವ ಇ–ಮಾಹಿತಿ ಪುಸ್ತಕದಲ್ಲಿ ನೀಡಲಾಗಿರುವ ಸೂಚನೆಗಳನ್ನು ಓದುವುದು ಅಥವಾ ಸಂಬಂಧಿಸಿದ ಪಾಲಿಟೆಕ್ನಿಕ್ ಪ್ರಾಂಶುಪಾಲರಿಂದ ಮಾಹಿತಿ ಪಡೆಯುವುದು.

3. *ಆನ್‌ಲೈನ್ ಅರ್ಜಿ, ಮೀಸಲಾತಿ ದಾಖಲಾತಿಗಳನ್ನು ಸಲ್ಲಿಸುವ ವಿಧಾನ:*

- ಪ್ರಥಮ ಡಿಪ್ಲೋಮಾ ಪ್ರವೇಶ ಬಯಸುವ ಅಭ್ಯರ್ಥಿಗಳು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **dtek.karnataka.gov.in, dtetech.karnataka.gov.in/kartechnical & www.cetonline.karnataka.gov.in/kea/**ಗಳಲ್ಲಿರುವ ಮಾಹಿತಿ ಪುಸ್ತಕವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಮಾಹಿತಿ ಪುಸ್ತಕದಲ್ಲಿರುವ ಸೂಚನೆಗಳನ್ನು ಮನದಟ್ಟು ಮಾಡಿಕೊಂಡ ನಂತರ **ಅಭ್ಯರ್ಥಿಯು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸಮೀಪ ಇರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಆನ್‌ಲೈನ್ ಅರ್ಜಿ ಸಲ್ಲಿಸಲು ಹಾಗೂ ತಮ್ಮ ಇಚ್ಛೆಯ ಅನುಸಾರ ಪಾಲಿಟೆಕ್ನಿಕ್/ಕೋರ್ಸ್‌ಗಳನ್ನು ಆಯ್ಕೆ ಮಾಡಿ ಆದ್ಯತಾ ಕ್ರಮಾನುಸಾರ ಗರಿಷ್ಠ ಸಂಖ್ಯೆಯ ಆಪ್ಷನ್ ಎಂಟ್ರಿಯನ್ನು ಆನ್‌ಲೈನ್‌ನಲ್ಲಿ ದಾಖಲಿಸಲು <u>ದಿ:07–09–2020 ರಿಂದ 16–09–2020 ಸಂಜೆ 5.30</u> ರವರೆಗೆ ಸಲ್ಲಿಸುವುದು.** ಆನ್‌ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಪ್ರತಿ ಮತ್ತು ಆಪ್ಷನ್ ಎಂಟ್ರಿ ದಾಖಲಿಸಿದ ಮುದ್ರಿತ ಪ್ರತಿಗಳನ್ನು ಪಡೆಯತಕ್ಕದ್ದು.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಯೊಂದಿಗೆ ಮೀಸಲಾತಿಯಡಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ವಿವರಗಳನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನಮೂದಿಸುವುದು. ಮೀಸಲಾತಿಯಡಿ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಮೂಲ ದಾಖಲಾತಿಗಳು ಇದ್ದಲ್ಲಿ, ಸ್ಕ್ಯಾನ್ ಮಾಡಿ PDF Format ನಲ್ಲಿ 1MB ಮೀರದಂತೆ ಕಡ್ಡಾಯವಾಗಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು. ದಾಖಲಾತಿಗಳು ಲಭ್ಯವಿಲ್ಲದಿದ್ದಲ್ಲಿ, ಮೀಸಲಾತಿ ಕ್ಲೇಮು ಮಾಡಿ ಸೀಟು ಆಯ್ಕೆ ಮಾಡಿಕೊಂಡ ನಂತರ ಪ್ರವೇಶಾತಿ ಸಮಯದಲ್ಲಿ ಸಂಬಂಧಪಟ್ಟ ಮೀಸಲಾತಿ ಮೂಲ ದಾಖಲಾತಿಯನ್ನು ಕಡ್ಡಾಯವಾಗಿ ಹಾಜರುಪಡಿಸುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.

4. <u>ಅರ್ಜಿ ಶುಲ್ಕ ಪಾವತಿಸುವ ವಿಧಾನ:</u>

ಕೋವಿಡ್–19 ಸಾಂಕ್ರಾಮಿಕ ರೋಗವು ಸಮುದಾಯದಲ್ಲಿ ಹರಡುತ್ತಿರುವ ಹಿನ್ನಲೆಯಲ್ಲಿ ಸರ್ಕಾರದ ನಿಯಮಗಳನ್ನು ಪಾಲಿಸುವ ನಿಟ್ಟಿನಲ್ಲಿ ಗುಂಪು ಸೇರುವುದನ್ನು ತಪ್ಪಿಸಲು ಹಾಗೂ ಬ್ಯಾಂಕ್‌ಗಳಲ್ಲಿ ಸಾಲುಗಟ್ಟಿ ನಿಂತು ಅರ್ಜಿ ಶುಲ್ಕವನ್ನು (ಸಾಮಾನ್ಯ ವರ್ಗ/2ಎ/2ಬಿ/3ಎ/3ಬಿ ರೂ.100/– & ಪ.ಜಾ/ಪ.ಪಂ/ಪ್ರವರ್ಗ–1 ರೂ.50) ಪಾವತಿಸುವುದನ್ನು ತಪ್ಪಿಸುವ ಸಲುವಾಗಿ ಈ ಸಾಲಿಗೆ ಮಾತ್ರ ಅನ್ವಯವಾಗುವಂತೆ ಡಿಪ್ಲೋಮಾ ಅರ್ಜಿ ಶುಲ್ಕವನ್ನು ನಗದು ರೂಪದಲ್ಲಿ ಸೀಟು ಆಯ್ಕೆ ಮಾಡಿಕೊಂಡು ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆಯುವ ಸಂದರ್ಭದಲ್ಲಿ ಪಾವತಿಸತಕ್ಕದ್ದು.

5. <u>ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದ ಶುಲ್ಕ:</u>

ಸರ್ಕಾರದ ಆದೇಶ ಸಂಖ್ಯೆ ಇಡಿ 119 ಟಿಪಿಇ 2005, ದಿನಾಂಕ:18-10-2005 ಮತ್ತು ಸರ್ಕಾರದ ಆದೇಶ ಸಂಖ್ಯೆ ಇಡಿ 10 ಟಿಪಿಇ 2012, ದಿನಾಂಕ:29-05-2012 ಹಾಗೂ ಸರ್ಕಾರದ ಪತ್ರ ಸಂ. ಇಡಿ 101 ಟಿಪಿಇ 2018, ದಿ:30-06-2018ರನ್ವಯ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಪಾಲಿಟೆಕ್ನಿಕ್‌ಗಳಿಗೆ ಅನ್ವಯವಾಗುವಂತೆ ಕೆಳಕಂಡ ಶುಲ್ಕವನ್ನು ನಿಗದಿಪಡಿಸಲಾಗಿದೆ.

| ಕ್ರ ಸಂ. | ಪಾಲಿಟೆಕ್ನಿಕ್ | ಬೋಧನಾ ಶುಲ್ಕ | ಅಭಿವೃದ್ಧಿ ಶುಲ್ಕ | ಇತರೆ ಶುಲ್ಕ | ಒಟ್ಟು |
|---|---|---|---|---|---|
| 1. | ಸರ್ಕಾರಿ ಪಾಲಿಟೆಕ್ನಿಕ್ | ₹ 2,940/- | ₹ 500/- | ₹ 830/- | ₹ 4,270/- |
| 2. | ಅನುದಾನಿತ ಪಾಲಿಟೆಕ್ನಿಕ್ | ₹ 5,618/- | ₹ 500/- | ₹ 830/- | ₹ 6,948/- |
| 3. | ಖಾಸಗಿ ಪಾಲಿಟೆಕ್ನಿಕ್ | ₹ 12,075/- | ₹ 500/- | ₹ 830/- | ₹ 13,405/- |

*ಎನ್.ಎಸ್.ಎಸ್ ಘಟಕ ಇರುವ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.40/-ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

** ಎನ್.ಎಸ್.ಎಸ್ ಘಟಕ ಇಲ್ಲದ ಸಂಸ್ಥೆಗಳು ಮೇಲ್ಕಂಡ ಇತರೆ ಶುಲ್ಕದ ಜೊತೆಗೆ ರೂ.50/-ನ್ನು ಎಲ್ಲಾ ವಿದ್ಯಾರ್ಥಿಗಳಿಂದ ಪ್ರವೇಶ ಸಮಯದಲ್ಲಿ ಪಾವತಿಸಿಕೊಳ್ಳತಕ್ಕದ್ದು.

ಡಿಪ್ಲೋಮಾ ಪ್ರವೇಶಕ್ಕೆ ಸಂಬಂಧಿಸಿದಂತೆ ಇರಬೇಕಾದ ಅರ್ಹತೆ, ಪಾಲಿಟೆಕ್ನಿಕ್‌ಗಳು, ಕೋರ್ಸ್‌ಗಳು, ಮೀಸಲಾತಿ ವಿವರ, ವಿವಿಧ ಮೀಸಲಾತಿಯಡಿಯಲ್ಲಿ ಕಾಯ್ದಿರಿಸಲಾಗಿರುವ ಸ್ಥಾನಗಳ ವಿವರ ಮುಂತಾದ ಮಾಹಿತಿಯನ್ನು ಮಾಹಿತಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಅಲ್ಲದೆ, ವಿವಿಧ ಪ್ರಮಾಣ ಪತ್ರಗಳ ನಮೂನೆಯನ್ನೂ ಸಹ ಇ-ಮಾಹಿತಿ ಪುಸ್ತಕದಲ್ಲಿ ಮುದ್ರಿಸಲಾಗಿದೆ. ಮಾಹಿತಿ ಪುಸ್ತಕದಲ್ಲಿ ನಮೂದಿಸಿರುವ ಸೂಚನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ಸ್ವತಃ ನೇರವಾಗಿ ವೆಬ್‌ಸೈಟ್‌ಗಳ ಮೂಲಕ ಅಥವಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಸಿಬ್ಬಂದಿಯ ಸಹಕಾರದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಲು ತಿಳಿಸಲಾಗಿದೆ.

ಮೇಲ್ಕಂಡಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಹೊಸದಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಎರಡನೇ ಮುಂದುವರೆದ **(Second Extended Round)** ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಇರುವುದನ್ನು ಅಭ್ಯರ್ಥಿಗಳು ಹಾಗೂ ಪೋಷಕರುಗಳಿಗೆ ಗಮನಕ್ಕೆ ತರಲು ಸ್ಥಳೀಯವಾಗಿ ಪತ್ರಿಕಾ ಪ್ರಕಟಣೆಯನ್ನು ನೀಡಿ, ಮೇಲ್ಕಂಡಂತೆ ಕ್ರಮ ತೆಗೆದುಕೊಂಡು ಸೂಚನಾ ಫಲಕದಲ್ಲಿ ಪ್ರಕಟಿಸಲು ಈ ಮೂಲಕ ಸೂಚಿಸಲಾಗಿದೆ.

*ಎರಡನೇ ಮುಂದುವರೆದ **(Second Extended Round)** ಸುತ್ತಿನ ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು. ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ "ಸಹಾಯ ಕೇಂದ್ರ" ಗಳಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ <u>dtek.karnataka.gov.in</u> or <u>dtetech.karnataka.gov.in/kartechnical</u> or <u>www.cetonline.karnataka.gov.in/kea/</u> ವೆಬ್ ಸೈಟ್‌ಗಳನ್ನು ಸಂಪರ್ಕಿಸಬಹುದಾಗಿರುತ್ತದೆ.*

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಗೆ,

*ರಾಜ್ಯದ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಮೇಲ್ಕಂಡಂತೆ ಕೂಡಲೇ ಕ್ರಮ ತೆಗೆದುಕೊಂಡು ಸಂಸ್ಥೆಯ ಸೂಚನಾ ಫಲಕದಲ್ಲಿ ಸುತ್ತೋಲೆಯನ್ನು ಪ್ರಕಟಿಸುವುದು.*

<u>ಪ್ರತಿ ಮಾಹಿತಿಗಾಗಿ:-</u>

1. ಆಯುಕ್ತರವರ ಆಪ್ತಶಾಖೆಗೆ.
2. ನಿರ್ದೇಶಕರವರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಆಡಳಿತ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
5. ಸಾರ್ವಜನಿಕ ಸಂಪರ್ಕಾಧಿಕಾರಿ, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
7. ಇ.ಆರ್.ಎಸ್ ವಿಭಾಗಕ್ಕೆ – ಅರ್ಹತಾ ಪ್ರಮಾಣ ಪತ್ರ ವಿತರಿಸಲು ಅಗತ್ಯ ಕ್ರಮಕ್ಕಾಗಿ.
8. ಎಸ್.ಟಿ.ಎಲ್ ಮತ್ತು ಡಿವಿಪಿ(2) ವಿಭಾಗಕ್ಕೆ.
9. ಕಛೇರಿ ಪ್ರತಿ.